**ಸಿಸಿ ನಂಃ 1890/2022**
**ಪಿ.ಡಬ್ಲ್ಯೂ: 01**

**ದಿನಾಂಕಃ 01.07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎನ್ ಟಿ ಎಸ್ ಆರೋಪಿ ಪರ ವಕೀಲರಿಂದ**

ನಾನು ರೈತರಿಂದ ಹಳೇ ಕಾಳುಗಳನ್ನು ಖರೀದಿಸಿ ವ್ಯಾಪಾರ ಮಾಡುತ್ತೇನೆ. ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಸದರಿ ವ್ಯಾಪಾರವನ್ನು ನಾನು 3 ವರ್ಷಗಳಿಂದ ಮಾಡುತ್ತಿದ್ದೇನೆ. 2022 ರಲ್ಲಿ ನಾನು ಸ್ವಂತ ಮೊಬೈಲ್ ಅಂಗಡಿಯನ್ನು ಹೊಂದಿದ್ದೆ. ನನ್ನ ಮೊಬೈಲ್ ಅಂಗಡಿಯ ಹೆಸರು ಲಕ್ಷ್ಮಿಶ್ರೀ. ಸದರಿ ಅಂಗಡಿಯನ್ನು ಚಳ್ಳಕೆರೆಯ ಪಾವಗಡ ರಸ್ತೆಯಲ್ಲಿ ನಡುಸುತ್ತಿದ್ದೆ. ಮೊಬೈಲ್ ಅಂಗಡಿಗೆ ಸಂಬಂಧಿಸಿದಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಅಂಗಡಿಯನ್ನು 3 ವರ್ಷಗಳ ಹಿಂದೆ ಮುಚ್ಚಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ನಾನು ಮೊಬೈಲ್ ಅಂಗಡಿಯನ್ನು ನಡೆಸುತ್ತಿದ್ದ ಬಗ್ಗೆ ನಮೂದಿಸಿರುವುದಿಲ್ಲ. 2022 ರಲ್ಲಿ ನಾನು ಮೊಬೈಲ್ ಅಂಗಡಿಯನ್ನು ಹೊರತು ಪಡಿಸಿ ಬೇರೆ ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ.

ನನಗೆ ಮೊಬೈಲ್ ಅಂಗಡಿಯಿಂದ ಅಂದಾಜು ಪ್ರತಿ ದಿನ 1000/- ರೂ. ಆದಾಯ ಬರುತ್ತಿತ್ತು. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಲಾಗಿದೆಯೇ ಎಂದರೆ ಮೊಬೈಲ್ ಅಂಗಡಿಯನ್ನು ಮುಚ್ಚಿರುವುದರಿಂದ ಹಾಜರು ಪಡಿಸಿರವುದಿಲ್ಲ, ಹಳೇ ಕಾಳಿನ ವ್ಯಾಪಾರವನ್ನು ಮಾಡುತ್ತಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. 2022 ರಲ್ಲಿ ನಾನು ಮೊಬೈಲ್ ವ್ಯಾಪರ ಮಾಡುವಾಗ ಗ್ರಾಹಕರಿಗೆ ಮೊಬೈಲ್ ಖರೀದಿ ಮಾಡಿದಾಗ ಬಿಲ್ ರಸೀದಿಯನ್ನು ಗ್ರಾಹಕರಿಗೆ ನೀಡಿ ನಕಲನ್ನು ನಾನು ಹೊಂದಿರುತ್ತಿದ್ದೆ ಎಂದರೆ ಸರಿ. ಬಿಲ್ ಪುಸ್ತಕ ನನ್ನ ಬಳಿ ಇರುತ್ತಿತ್ತು ಎಂದರೆ ಸರಿ. ಪ್ರತಿ ದಿನ 4-5 ಮೊಬೈಲ್ ಮಾರಾಟ ಮಾಡುತ್ತಿದ್ದೆ. ಬಿಲ್ ನಲ್ಲಿ ಮೊಬೈಲ್ ಕಂಪನಿಗಳನ್ನು ನಮೂದು ಮಾಡುತ್ತಿದ್ದೆ ಎಂದರೆ ಸರಿ. ಸದರಿ ಬಿಲ್ ಪುಸ್ತಕವನ್ನು ನ್ಯಾಯಾಲಯ ಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲವೇ ಎಂದರೆ ಸಾಕ್ಷಿಯು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದು

ನುಡಿಯುತ್ತಾರೆ.

**ಸಿಸಿ ನಂ: 1890/2022**
**ಪಿ.ಡಬ್ಲ್ಯೂ: 01**

2022 ರಲ್ಲಿ ನನಗೆ 2-3 ಲಕ್ಷ ಆದಾಯ ಬಂದಿರುತ್ತದೆ. ಸದರಿ ವಿಚಾರವಾಗಿ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನಾನು ಸ್ವಂತ ಮನೆಯಲ್ಲಿ ವಾಸವಾಗಿರುತ್ತೇನೆ. ನನಗೆ ಇಬ್ಬರು ಮಕ್ಕಳಿದ್ದು, ಒಬ್ಬ ಮಗಳು ಪಿಯುಸಿ, ಇನ್ನೊಬ್ಬರು ಎಸ್ ಎಸ್ ಎಲ್ ಸಿ ವ್ಯಾಸಂಗ ಮಾಡುತ್ತಿರುತ್ತಾರೆ. ಮನೆ ಖರ್ಚು ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರತಿ ವರ್ಷ 2-3 ಲಕ್ಷ ಖರ್ಚಾಗುತ್ತದೆ ಎಂದರೆ ಸಾಕ್ಷಿಯು 1 ರಿಂದ 1½ ಲಕ್ಷ ಖರ್ಚಾಗುತ್ತದೆ ಎಂದು ನುಡಿಯುತ್ತಾರೆ. ನಾನು ಮೊಬೈಲ್ ಅಂಗಡಿಯನ್ನು ನಷ್ಟವಾಗದ ಕಾರಣ ಮುಚ್ಚಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಕಣ್ಣಿನ ದೃಷ್ಟಿ ದೋಷ ಇರುವುದರಿಂದ ಮೊಬೈಲ್ ಅಂಗಡಿಯನ್ನು ಮುಚ್ಚಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದೂರಿನಲ್ಲಿ ಯಾವ ವ್ಯಾಪಾರ ಮಾಡುತ್ತಿದ್ದೇನೆ ಎಂದು ನಿಖರವಾಗಿ ನಮೂದಿಸಿಲ್ಲ ಎಂದರೆ ಸರಿ.

ಆರೋಪಿಯು ನನಗೆ ಸುಮಾರು 30-35 ವರ್ಷಗಳಿಂದ ನಮ್ಮ ಮನೆಯ ಹತ್ತಿರ ಇರುವುದರಿಂದ ಪರಿಚಯಸ್ಥರು. ಆರೋಪಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ನಿಪಿ.1 ಅನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಈಗಾಗಲೇ ಬರೆಸಿದ್ದ ನಿಪಿ.1 ಕ್ಕೆ ನನ್ನ ಸಮಕ್ಷಮ ಸಹಿ ಮಾಡಿ ನೀಡಿರುತ್ತಾರೆ. ನಿಪಿ.1 ನ್ನು ಯಾರು ಎಲ್ಲಿ ಬರೆದಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ಆರೋಪಿಗೆ ಇಂಗ್ಲೀಷ್ ಜ್ಞಾನ ಇರುವುದಿಲ್ಲ ಎಂದರೆ ಸರಿ.

ನಿಪಿ.2 ಅನ್ನು ಬ್ಯಾಂಕಿನಲ್ಲಿ ಒಬ್ಬರು ಗ್ರಾಹಕರಿಂದ ಬರೆಸಿರುತ್ತೇನೆ. ನಿಪಿ.2 ಅನ್ನು ನಾನು ಹೇಳಿ ಬರೆಸಿರುತ್ತೇನೆ. ಆರೋಪಿಯು ನಿಪಿ.1 ಅನ್ನು ಕೊಡುವಾಗ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿಗೆ ಹಣವನ್ನು ನೀಡುವಾಗ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ. ಆರೋಪಿಯು ಸುಮಾರು ವರ್ಷಗಳಿಂದ ಪರಿಚಯಸ್ಥರಾಗಿರುವುದರಿಂದ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ. ಈ ಚೆಕ್ ವ್ಯವಹಾರಕ್ಕಿಂತ ಪೂರ್ವದಲ್ಲಿ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ.

ನಾನು ಚಳ್ಳಕೆರೆಯ ಐ ಸಿ ಐ ಸಿ ಬ್ಯಾಂಕ್ ಮತ್ತು ಕೆನೆರಾ ಬ್ಯಾಂಕಿನಲ್ಲಿ ಖಾತೆ ಹೊದಿರುತ್ತೇನೆ. ಕೆನೆರಾ ಬ್ಯಾಂಕಿನ ಖಾತೆ ನಂಬರ್ ಹೇಳಲು ಆಗುವುದಿಲ್ಲ. ಕೆನೆರಾ ಬ್ಯಾಂಕಿನಲ್ಲಿ ಸುಮಾರು 10 ವರ್ಷಗಳಿಂದ ಖಾತೆ ಚಾಲ್ತಿಯಲ್ಲಿರುತ್ತದೆ. ನಾನು ಯಾವುದೇ ವ್ಯವಹಾರವನ್ನು ಬ್ಯಾಂಕ್ ಖಾತೆಯ ಮೂಲಕ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಕೆನೆರಾ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಐ ಸಿ ಐ ಸಿ ಐ ಬ್ಯಾಂಕ್ ನ ಖಾತೆಯು ಸುಮಾರು 4-5 ವರ್ಷಗಳಿಂದ ಚಾಲ್ತಿಯಲ್ಲಿರುತ್ತದೆ.

ಆರೋಪಿಯು ಹಮಾಲಿ ಕೆಲಸವನ್ನು ಮಾಡುತ್ತಾರೆ. ಆರೋಪಿಗೆ ಹಮಾಲಿ ಕೆಲಸವನ್ನು ಹೊರತು ಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಇಬ್ಬರು ಮಕ್ಕಳು. ಆರೋಪಿಯು ಸ್ವಂತ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆರೋಪಿಯು ಪ್ರತಿ ದಿನ ಹಮಾಲಿ ಕೆಲಸವನ್ನು ಮಾಡಿದರೆ ಮಾತ್ರ ಜೀವನ ಮಾಡಬಹುದು ಎಂದರೆ ಸರಿ. ಆರೋಪಿಯು ಪ್ರತಿ ದಿನ 300-400 ರೂ. ಆದಾಯವನ್ನು ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಲೋಡ್ ಇದ್ದಾಗ ಮಾತ್ರ ಕೆಲಸವಿದ್ದು, ಪ್ರತಿದಿನ ಕೆಲಸ ಇರುವುದಿಲ್ಲ ಎಂದರೆ ಸಾಕ್ಷಿಯು ಕೆಲಸ ಇದ್ದೆ ಇರುತ್ತದೆ ಎಂದು ನುಡಿಯುತ್ತಾರೆ. 2022-23 ನೇ ಸಾಲಿನಲ್ಲಿ ಆರೋಪಿಗೆ ಅಪಘಾತವಾಗಿ ಮನೆಯಲ್ಲೇ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಅಪಘಾತವಾಗಿದ್ದರಿಂದ 2022-23 ರಲ್ಲಿ ಮನೆಯಲ್ಲಿಯೇ ಇದ್ದುದರಿಂದ, ಆತನ ಹೆಂಡತಿ ಕೂಲಿ ಕೆಲಸಕ್ಕೆ ಹೋಗಿ ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ.

ಆರೋಪಿಯು ಯಾವ ದಿನಾಂಕ, ತಿಂಗಳಿನಲ್ಲಿ ಹಣವನ್ನು ಕೇಳಿರುತ್ತಾರೆ ಎಂದು ದೂರಿನಲ್ಲಿ ನಿಖರವಾಗಿ ನಮೂದಿಲ್ಲ ಎಂದರೆ ಸಾಕ್ಷಿಯು ಜುಲೈ ತಿಂಗಳು ಎಂದು ನಮೂದಿಸಿದ್ದು ದಿನಾಂಕವನ್ನು ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಯಾವ ದಿನಾಂಕ, ತಿಂಗಳಿನಲ್ಲಿ ಹಣವನ್ನು ನೀಡಲಾಗಿತ್ತು ಎಂದು ದೂರಿನಲ್ಲಿ ನಿಖರವಾಗಿ ನಮೂದಿಲ್ಲ ಎಂದರೆ ಸಾಕ್ಷಿಯು ಜುಲೈ ತಿಂಗಳು ಎಂದು ನಮೂದಿಸಿದ್ದು ದಿನಾಂಕವನ್ನು ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಬಡ್ಡಿಯ ದರದ ಬಗ್ಗೆ ಮಾತುಕತೆ ಮಾಡಿರುವುದಿಲ್ಲ. ಆರೋಪಿಯು ಬಡ್ಡಿಯ ಸಹಿತ ಮರು

ಪಾವತಿಸುತ್ತೇನೆ ಎಂದು ಹೇಳಿದ್ದರಿಂದ ಸದರಿ ವಿಚಾರವನ್ನು ದೂರಿನಲ್ಲಿ ನಮೂದಿಸಲಾಗಿರುತ್ತದೆ. ಬಡ್ಡಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ, ಆರೋಪಿಯಿಂದ ಬಡ್ಡಿಯನ್ನು ವಸೂಲಿ ಮಾಡಿರುವುದಿಲ್ಲ.

**( ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.